**<u>ದಿ: 01.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು: ವಾದಿ ಪರ ವಕೀಲರಿಂದ:</u>**

5. ಎಂ.ಎ. **07/2005** ಅಪೀಲನ್ನು 3 ನೇ ಪ್ರತಿವಾದಿಯವರು ಯಾವ ಸರ್ವೆ ನಂಬರ್ ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿರುತ್ತಾರೆ ಎಂದು ಹೇಳಲು ನನಗೆ ಗೊತ್ತಿಲ್ಲ. ಸದರಿ ಅಪೀಲಿನಲ್ಲಿ ವಾದಿಗಳು ಅಥವಾ ಅವರ ತಂದೆ ಪಕ್ಷಗಾರರಾಗಿರುವುದಿಲ್ಲ. ಸರ್ವೆ ನಂಬರ್ **178/2** ಆಸ್ತಿ ಈಗ ಎರಡು ಸರ್ವೆ ನಂಬರ್ ಗಳಾಗಿ ವಿಂಗಡಣೆ ಆಗಿರುತ್ತದೆ. ಸದರಿ ವಿಂಗಡಣೆಯಾದ ಸರ್ವೆ ನಂಬರ್ ಗಳ ಬಗ್ಗೆ ಹೇಳಲು ನನಗೆ ಗೊತ್ತಿಲ್ಲ.

6. ಓಎಸ್ 243/89 ಮತ್ತು 260/89 ದಾವೆಯನ್ನು 3 ನೇ ಪ್ರತಿವಾದಿಯವರು 2 ನೇ ಪ್ರತಿವಾದಿಯವರ ವಿರುದ್ಧ ದಾಖಲಿಸಿದ್ದರು. ಸದರಿ ದಾವೆಗಳನ್ನು ಆಸ್ತಿಯಲ್ಲಿ ಸಮಪಾಲು ಆಗಬೇಕು ಎಂದು ಕೇಳಿಕೊಂಡು ದಾಖಲಿಸಿದ್ದರು. ಸದರಿ ದಾವೆಗಳನ್ನು 2 ನೇ ಪ್ರತಿವಾದಿಯವರ ವಿರುದ್ಧ ಮಾತ್ರ ದಾಖಲಿಸಿದ್ದರು. ಸದರಿ ದಾವೆಗಳಲ್ಲಿ ಕರ್ತರನ ತಿಮ್ಮಯ್ಯರವರ ಉಳಿದ ವಾರೀಸುದಾರರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ಎರಡೂ ದಾವೆಗಳನ್ನು 2 ಮತ್ತು 3 ನೇ ಪ್ರತಿವಾದಿಯವರು ರಾಜಿ ಮಾಡಿಕೊಂಡಿರುತ್ತಾರೆ. ಸದರಿ ರಾಜಿ ಡಿಕ್ರಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಸದರಿ ರಾಜಿ ಡಿಕ್ರಿಯ ಪ್ರಕಾರ ವಾದಿಗಳಿಗೆ ಯಾವುದೇ ಆಸ್ತಿಯನ್ನು ಕೊಟ್ಟಿರುವುದಿಲ್ಲ ಆದರೆ ಬೇರೆ ಆಸ್ತಿಗಳನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ವಾದಿಗಳಿಗೆ ನಾವು ಬೇರೆ ಆಸ್ತಿಗಳನ್ನು ಕೊಟ್ಟ ಬಗ್ಗೆ ದಾಖಲೆ ಇದೆ.

7. ಓಎಸ್ 46/2004 ದಾವೆಯನ್ನು ನನ್ನ ತಂದೆ ಅಯ್ಯಣ್ಣ ಮತ್ತು ಕುಶಾಲಪ್ಪ ಎಂಬುವವರ ವಿರುದ್ಧ ದಾಖಲಿಸಿದ್ದರು. ಸದರಿ ದಾವೆಯಲ್ಲಿ ಕುಶಾಲಪ್ಪ ಅಥವಾ ವಾದಿಗಳು ಪಕ್ಷಗಾರರಾಗಿರುವುದಿಲ್ಲ ಎಂದರೆ ಸರಿ. ಆರ್.ಎ. 07/1998 ಅಪೀಲನ್ನು ನನ್ನ ತಂದೆಯವರು ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದಲ್ಲಿ ಇರುವ ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿದಂತಹ ಅಪೀಲು ಆಗಿರುತ್ತದೆ ಎಂದರೆ ಸುಳ್ಳು. ಸದರಿ ಅಪೀಲಿನಲ್ಲಿ ಕೆ.ಟಿ.ಮೊಣ್ಣಪ್ಪ ಎಂದು ಕಂಡುಬರುವುದು ನನ್ನ ತಂದೆ ಎಂದರೆ ಸರಿ. ಈ ದಾವೆಯಲ್ಲಿ ವಾದಿಯವರು ಸುಳ್ಯ ತಾಲೂಕಿನ ಆಲೆಟ್ಟಿ ಗ್ರಾಮದಲ್ಲಿ ಇರುವ ಆಸ್ತಿಗೆ ಸಂಬಂಧಿಸಿದಂತೆ ದಾಖಲಿಸಿರುವುದಿಲ್ಲ ಎಂದರೆ ಸರಿ.

8. ನಿಪಿ-3 ಕರ್ಕರನ ತಿಮ್ಮಯ್ಯರವರಿಗೆ ಸಂಬಂಧಿಸಿದ ವಂಶವೃಕ್ಷ ಎಂದರೆ ಸರಿ. ಕರ್ಕರ ತಿಮ್ಮಯ್ಯರವರಿಗೆ ಸಂಬಂಧಿಸಿದ ಎಲ್ಲಾ ವಾರೀಸುದಾರರ ಬಗ್ಗೆ ನಿಪಿ-3 ರಲ್ಲಿ ಇದೆ ಎಂದರೆ ಸರಿ. ನಿಪಿ-4 ರಲ್ಲಿ 18 ನೇ ಪ್ರತಿವಾದಿಯವರ ಹೆಸರಿನಲ್ಲಿ ಇದೆ ಎಂದರೆ ಸರಿ. **18** ನೇ ಪ್ರತಿವಾದಿ ನನ್ನ ತಮ್ಮ ಎಂದರೆ ಸರಿ. ನಿಪಿ-5 ರಲ್ಲಿ ಕಾಣುವ ಕರ್ಕರನ ಬೋಪಯ್ಯ ಎಂದರೆ ನಮ್ಮ ಕುಟುಂಬದ ಪಟ್ಟೆದಾರರ ಹೆಸರು ಆಗಿರುತ್ತದೆ ಎಂದರೆ ಸರಿ. ಸದರಿಯವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಕರ್ಕರನ ಬೋಪಯ್ಯರವರು ನಮ್ಮ ಕುಟುಂಬದ ಪಟ್ಟೆದಾರರಾಗಿರುವ ಕಾರಣದಿಂದ ನಿಪಿ-**5** ರಲ್ಲಿ ಅವರ ಹೆಸರು ಇದೆಯೇ ಹೊರತು ಸದರಿಯವರಿಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ನಿಪಿ-5 ರಲ್ಲಿ ಇರುವ ಕೆ.ಕೆ.ಪೂವಮ್ಮ ಎಂದರೆ ನಮ್ಮ ಕುಟುಂಬದವರಾಗಿರುತ್ತಾರೆ. ಸದರಿಯವರ ಭಾಗ ಬೇರೆ ಮತ್ತು ನಮ್ಮ ಭಾಗ ಬೇರೆ ಆಗಿರುತ್ತದೆ.

9. ದಾವಾ ಶೆಡ್ಯೂಲ್ ಐಟಂ ನಂಬರ್ **5** ಜಮ್ಮಾ ಆಸ್ತಿಯಾಗಿರುತ್ತದೆ. ನಿಪಿ-**8** ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳು ಕೋವಿ ಪರವಾನಗಿಯನ್ನು ಪಡೆದುಕೊಳ್ಳುವ ಸಲುವಾಗಿ ತಮ್ಮ ಹೆಸರನ್ನು ಸೇರಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-**8** ಸರ್ವೆನಂಬರಿನ **12** ಸೆಂಟ್ಸ್ ಆಸ್ತಿಯಲ್ಲಿ ನನ್ನ ತಾತನಿಗೆ ಹಕ್ಕು ಇರುವುದಿಲ್ಲ. ದಾವಾ ಶೆಡ್ಯೂಲ್ ಐಟಂ ನಂಬರ್ 6 ರಲ್ಲಿ ನನ್ನ ಅಜ್ಜನಿಗೆ 2.38 ಸೆಂಟ್ಸ್ ಆಸ್ತಿಯಲ್ಲಿ ಹಕ್ಕು ಇದೆ. ನಿಪಿ-9 ಆರ್.ಟಿ.ಸಿಯಲ್ಲಿ ಇರುವ ಬೇರೆ ವ್ಯಕ್ತಿಗಳಿಗೆ ಸದರಿ ಆಸ್ತಿಯಲ್ಲಿ ಹಕ್ಕು ಇರುವುದಿಲ್ಲ. ನಿಪಿ-11 ಆರ್.ಟಿ.ಸಿಯಲ್ಲಿ ಇರುವ ಚಿಣ್ಣಪ್ಪ, ಲಕ್ಷ್ಮಣ, ಸುರೇಶ, ಯಶೋದಮ್ಮ, ನಂಜಪ್ಪರವರಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ 8 ರಲ್ಲಿ ಹಕ್ಕು ಇದೆ. ದಾವಾ ಶೆಡ್ಯೂಲ್ ಐಟಂ ನಂಬರ್ 9 ಆಸ್ತಿಗೆ ಸೇರಿದ ಆರ್.ಟಿ.ಸಿ ಇದೆ ಎಂದರೆ ಸರಿ. ಸದರಿ ಆಸ್ತಿ ನನ್ನ ತಂದೆಯವರ ಪಾಲಿಗೆ ಬಂದಂತಹ ಆಸ್ತಿಯಾಗಿದ್ದು ನಮ್ಮ ಕುಟುಂಬದವರ ಒಪ್ಪಿಗೆಯನ್ನು ಪಡೆದುಕೊಂಡು ನನ್ನ ಹೆಸರಿನಲ್ಲಿ ಆರ್.ಟಿ.ಸಿಯನ್ನು ಬದಲಾವಣೆ ಮಾಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ ನಾನು ವಾದಿಯವರ ಒಪ್ಪಿಗೆಯನ್ನು ಪಡೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ವಾದಿಯವರು ಆಗ ಊರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ.

10. ನಿಪಿ-13 ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ 10 ರಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ನಿಪಿ-14 ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ 11 ರಲ್ಲಿ ಯಾವುದೇ ಹಕ್ಕು ಇರುವುದಿಲ್ಲ. ಅದೇ ರೀತಿ ನನ್ನ ಅಜ್ಜನಿಗೆ ಮತ್ತು ನನಗೆ ಯಾವುದೇ ಹಕ್ಕು ಇರುವುದಿಲ್ಲ. ನಿಪಿ-15 ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ 12 ರಲ್ಲಿ ಹಕ್ಕು ಇದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಾದ ತಿಮ್ಮಯ್ಯರವರಿಗೆ ಹಕ್ಕು ಇರುವುದಿಲ್ಲ. ನಿಪಿ-16 ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ 13 ರಲ್ಲಿ ಹಕ್ಕು ಇದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಾದ ತಿಮ್ಮಯ್ಯರವರಿಗೆ ಯಾವುದೇ ಹಕ್ಕು ಇರುವುದಿಲ್ಲ.

11. ನಿಪಿ-**17** ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ **14** ರಲ್ಲಿ ಹಕ್ಕು ಇದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಾದ ತಿಮ್ಮಯ್ಯರವರಿಗೆ ಯಾವುದೇ ಹಕ್ಕು ಇರುವುದಿಲ್ಲ. ನಿಪಿ-**18** ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ **15** ರಲ್ಲಿ ಹಕ್ಕು ಇದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಾದ ತಿಮ್ಮಯ್ಯರವರಿಗೆ ಯಾವುದೇ ಹಕ್ಕು ಇರುವುದಿಲ್ಲ. ನಿಪಿ-**19** ರಲ್ಲಿ ಕಾಣುವ ಹೆಸರಿನ ವ್ಯಕ್ತಿಗಳಿಗೆ ದಾವಾ ಶೆಡ್ಯೂಲ್ ಐಟಂ ನಂಬರ್ **16** ರಲ್ಲಿ ಹಕ್ಕು ಇದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಾದ ತಿಮ್ಮಯ್ಯರವರಿಗೆ ಯಾವುದೇ ಹಕ್ಕು ಇರುವುದಿಲ್ಲ.

12. ನಿಪಿ-**20** ಆರ್.ಟಿ.ಸಿಯನ್ನು ನಾನು ನಮ್ಮ ಕುಟುಂಬದವರ ಒಪ್ಪಿಗೆಯ ಮೇರೆಗೆ ಬದಲಾವಣೆ ಮಾಡಿಕೊಂಡಿರುತ್ತೇನೆ. ನಿಪಿ-**21** ರ ಪ್ರಕಾರ ಕರ್ಕರನ ಕಾವೇರಪ್ಪರವರು ದಾವಾ ಶೆಡ್ಯೂಲ್ ಐಟಂ ನಂಬರ್ **18** ಆರ್.ಟಿ.ಸಿಯನ್ನು ಕುಟುಂಬದವರ ಒಪ್ಪಿಗೆಯ ಮೇರೆಗೆ ಬದಲಾವಣೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾ ಶೆಡ್ಯೂಲ್ ಐಟಂ ನಂಬರ್ **19** ಆಸ್ತಿಯನ್ನು 18 ನೇ ಪ್ರತಿವಾದಿಯವರು ಮಾರಾಟ ಮಾಡಿರುತ್ತಾರೆ. ಸಾಕ್ಷಿ ಮುಂದುವರೆದು ನನ್ನ ತಂದೆಗೆ ಬಂದಂತಹ ಪಾಲಿನ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಐಟಂ ನಂಬರ್ **20** ಕರ್ಕರನ ಮುತ್ತಪ್ಪ ಎಂಬುವವರಿಗೆ ಸಂಬಂಧಿಸಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಿಗೆ ಹಕ್ಕು ಇರುವುದಿಲ್ಲ. ದಾವಾ ಶೆಡ್ಯೂಲ್ ಐಟಂ ನಂಬರ್ **21** ಕೂಡಾ ಕರ್ಕರನ ಮುತ್ತಪ್ಪರವರಿಗೆ ಸಂಬಂಧಿಸಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಿಗೆ

ಹಕ್ಕು ಇರುವುದಿಲ್ಲ. ದಾವಾ ಶೆಡ್ಯೂಲ್ ಐಟಂ ನಂಬರ್ 22 ಕೂಡಾ ಕರ್ಕರನ ಮುತ್ತಪ್ಪರವರಿಗೆ ಸಂಬಂಧಿಸಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಿಗೆ ಹಕ್ಕು ಇರುವುದಿಲ್ಲ. ದಾವಾ ಶೆಡ್ಯೂಲ್ ಐಟಂ ನಂಬರ್ 23 ನ್ನು ನನ್ನ ತಂದೆಯವರು ಕ್ರಯಕ್ಕೆ ಪಡೆದುಕೊಂಡಿದ್ದರು. ಸದರಿ ಆಸ್ತಿಯನ್ನು 6 ನೇ ಪ್ರತಿವಾದಿಯವರು ಮಾರಾಟ ಮಾಡಿರುತ್ತಾರೆ. ನನ್ನ ತಂದೆ ಕೃಷಿಯಲ್ಲಿ ಬಂದಂತಹ ಸಂಪಾದನೆಯಲ್ಲಿ ಸದರಿ ಅಸಿತಯನ್ನು ಖರೀದಿಸಿದ್ದರು. ದಾವಾ ಶೆಡ್ಯೂಲ್ ಐಟಂ ನಂಬರ್ 24 **ಮತ್ತು** 25 ಆಸ್ತಿಗಳು ನನ್ನ ಅಜ್ಜನಿಗೆ ಸಂಬಂಧಿಸಿದ ಆಸ್ತಿಯಾಗಿರುವುದಿಲ್ಲ. ದಾವಾ ಶೆಡ್ಯೂಲ್ ಐಟಂ ನಂಬರ್ 26 ಮತ್ತು 27 ಕರ್ಕರನ ಬೋಪಯ್ಯರವರಿಗೆ ಸಂಬಂಧಿಸಿದ ಆಸ್ತಿಯಾಗಿರುತ್ತದೆ. ಸದರಿ ಆಸ್ತಿಯಲ್ಲಿ ನನ್ನ ಅಜ್ಜನಿಗೆ ಹಕ್ಕು ಇರುವುದಿಲ್ಲ. 17 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದಂತಹ ಎಲ್ಲಾ ಆಸ್ತಿ ಕುಟುಂಬ ಆಸ್ತಿಯಾಗಿರುತ್ತದೆ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ನನ್ನ ತಂದೆಯ ಪಾಲಿಗೆ ಬಂದಂತಹ ಆಸ್ತಿಯನ್ನು ಮಾರಾಟ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಪಿ-31 ಕ್ರಯಪತ್ರದಲ್ಲಿ ಯಾವಾಗ ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡಿರುತ್ತೇವೆ ಎಂಬುದರ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯವರು 18 ನೇ ಪ್ರತಿವಾದಿಯವರ ಹಿಸ್ಸೆಗೆ ನೀಡಿದಂತಹ ಆಸ್ತಿಯನ್ನು ಸದರಿಯವರು ಮಾರಾಟ ಮಾಡಿರುತ್ತಾರೆ. 18 ನೇ ಪ್ರತಿವಾದಿಯವರು ನಮ್ಮನ್ನು ಒಪ್ಪಿಗೆ ಸಾಕ್ಷಿದಾರರಾಗಿ ಸಹಿ ಮಾಡಲು ತಿಳಿಸಿದ ಕಾರಣದಿಂದ ನಾವು ನಿಪಿ-31 ಕ್ಕೆ ಸಹಿ ಮಾಡಿರುತ್ತೇವೆ. ನಮ್ಮಗಳ ಮಧ್ಯದಲ್ಲಿ ಕಾನೂನಿನ ಪ್ರಕಾರ ಆಸ್ತಿ ವಿಭಾಗ ಆಗದೇ ಇರುವುದರಿಂದ ನಾನು ಒಪ್ಪಿಗೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದಾರೆ. ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್. ಬಿ. ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.